SUPA - ANASHI SPAN.

ಕರ್ನಾಟಕ ಸರ್ಕಾರ

(ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)

ಸಂ/ಲೋ.ಬ.ಮತ್ತುಒ.ಜ.ಇ.ವಿ/ಶಿರಸಿ/ಪಿಬಿ-2/OFC/2018-19

255

ಕಾರ್ಯನಿರ್ವಾಹಕ ಇಂಜಿನೀಯರರು ಹಾಗೂ
ರಾಜ್ಯ ಹೆದ್ದಾರಿ ಪ್ರಾಧಿಕಾರಿ ಅಧಿಕಾರಿಯವರ ಕಚೇರಿ,
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ ವಿಭಾಗ, ಶಿರಸಿ
(ಉತ್ತರಕನ್ನಡ ಜಿಲ್ಲೆ)
ದಿನಾಂಕ: 23/5/2018

ಇವರಿಗೆ,

Reliance Jio infocomm Limited,
RMZ Icon, No. 51, Palace road Cross,
Vasanth Nagar, Bangalore - 560052.

ಮಾನ್ಯರೆ,

ವಿಷಯ : ರಿಲಾಯನ್ಸ್ ಕೇಬಲ್ ಅಳವಡಿಸಲು ಅನುಮತಿ ನೀಡುವ ಕುರಿತು

ಉಲ್ಲೇಖ : 1. ನಿಮ್ಮ ಕಚೇರಿ ಪತ್ರ ಸಂಖ್ಯೆ: RJIL: OFC: ROW: NLD-7A: Supa-Dandeli/PWD: 001: DD: Dated: 16-05-2018

--- *** ---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಚೇರಿ ಪತ್ರ ಸಂಖ್ಯೆ: ಲೋ.ಬ. ಮತ್ತು ಒ.ಜ.ಇ.ವಿ: ಶಿರಸಿ: ಪಿಬಿ-2: ಓ.ಎಫ್.ಸಿ: 2018-19: 188 ದಿನಾಂಕ: 09-05-2018 ರನ್ವಯ , ಉತ್ತರ ಕನ್ನಡ **ಜಿಲ್ಲೆಯ ಜೋಯಿಡಾ ತಾಲೂಕಿನ ಔರಾದ ಸದಾಶಿವಗಡ ರಸ್ತೆ ರಾಜ್ಯ ಹೆದ್ದಾರಿ-34 ರ ಕಿಮೀ. 637.50 ರಿಂದ 677 & 626.00 ರಿಂದ 637.50** ರವರೆಗೆ ಓ.ಎಫ್.ಸಿ. ಕೇಬಲ್ ಅಳವಡಿಸಿದ ನಂತರ ಪುನಃಸ್ಥಾಪನೆಗಾಗಿ ತಗಲುವ ವೆಚ್ಚ ರೂ, **3200000/- (ರೂ ಮೂವತ್ತೆರಡು ಲಕ್ಷ)** ಗಳನ್ನು ಭರಣ ಮಾಡಲು ತಿಳಿಸಲಾಗಿತ್ತು. ಅದರಂತೆ ಉಲ್ಲೇಖಿತ ತಮ್ಮ ಕಚೇರಿ ಪತ್ರದನ್ವಯ ಡಿಮ್ಯಾಂಡ್ ಡ್ರಾಫ್ಟ್ ಸಂಖ್ಯೆ: **246527** ದಿನಾಂಕ: **15-05-2018** ರನ್ವಯ ಈ ಕಚೇರಿಗೆ ಭರಣ ಮಾಡಿರುತ್ತೀರಿ. ಅದರಂತೆ ಈ ಕೆಳಕಾಣಿಸಿರುವ ಶರತ್ತಿಗೊಳಪಟ್ಟು ಓ.ಎಫ್.ಸಿ ಕೇಬಲ್ ಅಳವಡಿಸಲು ಅನುಮತಿ ನೀಡಲಾಗಿದೆ.

1. ರಸ್ತೆ ಬದಿಯ ಚರಂಡಿಯ ಹೊರಭಾಗದಿಂದ ಸಾಕಷ್ಟು ದೂರದಲ್ಲಿ ಹಾಗೂ ನೆಲದ ಮೇಲ್ಮೈ ಎತ್ತರದಿಂದ 1.65 ಮೀಟರ್ ಆಳಕ್ಕೆ ಕೇಬಲ್ ಅಳವಡಿಸುವುದು. ಅನಿವಾರ್ಯ ಹಾಗೂ ಅಸಾಧಾರಣ ಪ್ರಕರಣಗಲ್ಲಿ ಮಾತ್ರ ಡಾಂಬರ ರಸ್ತೆ ಕತ್ತರಿಸಲು ಅವಕಾಶ ನೀಡಲಾಗುವುದು. ಇಂತಹ ಸಂದರ್ಭದಲ್ಲಿ ಕೆಲಸ ಪ್ರಾರಂಭಿಸುವ ಪೂರ್ವ ಸದರೀ ರಸ್ತೆಯ ಪುನಃಸ್ಥಾಪನಾ ವೆಚ್ಚವನ್ನು **ರಿಯಾಲೈನ್ಸ್ ಜಿಯೋ ಇನ್‌ಫೋಕಾಮ್** ಲಿ. ಬೆಂಗಳೂರು ಇವರಿಂದ ಠೇವಣಿ ಮಾಡಿಕೊಂಡು ಅನುಮತಿಸಲಾಗುವುದು. ಕೆಲಸವನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯವರಿಂದ ಪ್ರಸ್ತಾಪಿಸಲಾದ ಸ್ಥಳದ ನಕ್ಷೆಯೊಂದಿಗೆ ಪರಿವೀಕ್ಷಣೆ ಮಾಡಿಸಿ ಅವರ ನಿರ್ದೇಶನದಂತೆ ಕೆಲಸ ನಿರ್ವಹಿಸುವುದು.
2. ಓ.ಎಫ್.ಸಿ. ಕೇಬಲನ್ನು ಮಳೆಗಾಲದ ನಂತರ ಅಳವಡಿಸುವುದು
3. ಕಾಮಗಾರಿ ಪೂರ್ಣಗೊಂಡ ನಂತರ ಓ.ಎಫ್.ಸಿ. ಅಳವಡಿಸಿದ ಸ್ಥಳದಲ್ಲಿ ಸೂಕ್ತ, ಸಾಮಗ್ರಿಗಳನ್ನು ಉಪಯೋಗಿಸಿ, MORT/ISI ಸ್ಪೇಶಿಫಿಕೇಶನ್ ಪ್ರಕಾರ ಸಮಮಟ್ಟ ಮಾಡಿ ಸ್ಥಳವನ್ನು ಪೂರ್ವ ಸ್ಥಿತಿಗೆ ತರುವುದು.
4. ಕೇಬಲ್ ಅಳವಡಿಸುವ ಸಮಯದಲ್ಲಿ ಉಂಟಾಗುವ ಉದ್ದ ಚರಂಡಿ/ ಅಡ್ಡ ಚರಂಡಿ / ಬದಿ ಚರಂಡಿಗಳು ಮುಚ್ಚಿ ನೀರು ಸರಾಗವಾಗಿ ಹೋಗಲು ಅಡೆ ತಡೆಯಾದಲ್ಲಿ ಅದನ್ನು ತೆರವುಗೊಳಿಸಿ ಚರಂಡಿಗಳನ್ನು ಪೂರ್ವಸ್ಥಿತಿಗೆ ತರುವುದು.
5. ಕಾಮಗಾರಿ ಪ್ರಗತಿಯಲ್ಲಿರುವಾಗ ರಸ್ತೆ ಸುರಕ್ಷತಾ ಕ್ರಮಗಳನ್ನು ತಪ್ಪದೇ ಪಾಲಿಸುವುದು. ಸುರಕ್ಷತಾ ಕ್ರಮಗಳಾದ ರಸ್ತೆ ತಡೆಗಟ್ಟುವಿಕೆ, ಅಪಾಯ ಸೂಚಿಸುವ ದೀಪಗಳು, ಎಚ್ಚರಿಕೆ ಫಲಕಗಳನ್ನು ಕಡ್ಡಾಯವಾಗಿ ಅಳವಡಿಸುವುದು. ಅಗತ್ಯವಿದ್ದಲ್ಲಿ ರಸ್ತೆಯ ಸುಗಮ ಸಂಚಾರಕ್ಕೆ ಟ್ರಾಫಿಕ್ ಪೋಲೀಸರನ್ನು ನೇಮಿಸಿಕೊಂಡು ಸಂಚಾರಕ್ಕೆ ಅಡ್ಡಿಯಾಗದಂತೆ ಕ್ರಮ ಜರುಗಿಸುವುದು. ಈ ಸಮಯದಲ್ಲಿ ಸಂಚಾರ ನಿಲುಗಡೆ ಹಾಗೂ ಅಪಘಾತ ಸಂಭವಿಸಿದಲ್ಲಿ ನೀವೇ ಮಾತ ಜವಾಬ್ದಾರರು.
6. ಅಗೆತ ಹಾಗೂ ಪುನಃಭರ್ತಿ ಕೆಲಸವನ್ನು ಅನುಮತಿಸಿದ ದಿನಾಂಕದಿಂದ 90 ದಿನಗಳೊಳಗಾಗಿ ಪೂರ್ಣಗೊಳಿಸಿ ಸ್ಥಳವನ್ನು ಪೂರ್ವಸ್ಥಿತಿಯಲ್ಲಿರುವಂತೆ ಮಾಡುವುದು.
7. ಹಾಲಿ ಇರುವ ಅಡ್ಡಮೋರಿಗಳು, ಸೇತುವೆಗಳು, ಮಾಹಿತಿ ಫಲಕಗಳು, ಸೂಚನಾಫಲಕಗಳು, ಕಿಮೀ. ಕಲ್ಲುಗಳು, ಹೆಕ್ಟೋಮೀ. ಕಲ್ಲುಗಳು, ನೀರು ಸರಬರಾಜು ಪೈಪುಲೈನ್‌ಗಳು, ಹೆಸ್ಕಾಂ ಕೇಬಲ್‌ಗಳು, ಹಾಗೂ ಬಿ.ಎಸ್.ಎನ್.ಎಲ್ ಕೇಬಲುಗಳು ಇತ್ಯಾದಿ ಸಾರ್ವಜನಿಕ ಆಸ್ತಿಗಳಿಗೆ ಹಾನಿಯಾಗದಂತೆ ಜಾಗ್ರತೆ ವಹಿಸುವುದು.

8. ರಸ್ತೆಯ ಅಗಲೀಕರಣ ಹಾಗೂ ಅಭಿವೃದ್ಧಿ ಸಂದರ್ಭದಲ್ಲಿ ನೀವು ಅಳವಡಿಸಿದ ಕೇಬಲ್‌ಗಳನ್ನು ಸ್ಥಳಾಂತರ ಅಥವಾ ಮಾರ್ಪಾಡು ಮಾಡಬೇಕಿದ್ದಲ್ಲಿ ನಂತರದ ದಿನಾಂಕದಿಂದ ನಿಗದಿಪಡಿಸಿದ ಅವಧಿಯೊಳಗೆ ಪೂರ್ಣಗೊಳಿಸುವುದು ಹಾಗೂ ಇದರ ವೆಚ್ಚವನ್ನು ರಿಯಾಲೈನ್ಸ್ ಜಿಯೋ ಇನ್‌ಫೋಕಾಮ್ ಲಿ. ಬೆಂಗಳೂರು ಇವರಿಂದ ಭರಿಸುವುದು.

9. ಕೇಬಲ್ ಅಳವಡಿಸುವ ಸ್ಥಳದಲ್ಲಿ ನಿರ್ಬಂಧಗಳೇನಾದರು ಇದ್ದಲ್ಲಿ ಸಂಬಂಧಿಸಿದ ಶಾಖಾಧಿಕಾರಿ ಅಥವಾ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರನ್ನು ಸಂಪರ್ಕಿಸಿ ಅವರ ನಿರ್ದೇಶನ ಪಾಲಿಸುವುದು.

10. ಕೇಬಲನ್ನು ಅಳವಡಿಸಿದ ನಂತರ ಪುರ್ನಭರ್ತಿ ಕೆಲಸವನ್ನು ಸರಿಯಾದ ಸಂಕೋಚನ ಕ್ರಮದಲ್ಲಿ ನಿರ್ಧಿಷ್ಟ ನಿಯಮದಂತೆ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್/ ಶಾಖಾಧಿಕಾರಿಗಳು ಮೇಲ್ವಿಚಾರಣೆಯಡಿಯಲ್ಲಿ ಇಲಾಖೆಗೆ ತೃಪ್ತಿಕರವಾಗುವಂತೆ ಕೈಗೊಳ್ಳುವುದು.

11. ಯಾವುದೇ ಚೇಂಬರನ್ನು ನಿರ್ಮಾಣ ಮಾಡುವ ಪೂರ್ವದಲ್ಲಿ ನಿರ್ಮಾಣ ಸ್ಥಳವನ್ನು ಸಂಬಂಧಿಸಿದ ಶಾಖಾಧಿಕಾರಿ/ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ ಲೋಕೋಪಯೋಗಿ ಇಲಾಖೆ ಇವರ ಗಮನಕ್ಕೆ ತರಬೇಕು.

12. ರಸ್ತೆಯ ರಚನೆಗೆ ಹಾನಿಯಾಗುವಂತಹ ಯಾವುದೇ ಯಂತ್ರೋಪಕರಣಗಳನ್ನು ಟ್ರೆಂಚ್ ಅಗೆಯಲು ಬಳಸಕೂಡದು..

13. ಎಲ್ಲಾ ಭೂಗತ ಸೌಲಭ್ಯಗಳಾದ ಅಡ್ಡಮೋರಿಗಳ ರಚನೆಗಳಿಗೆ, ನೀರು ಸರಬರಾಜು ಪೈಪ್‌ಲೈನ್, ವಿದ್ಯುತ್ ಕೇಬಲ್‌ಗಳು, ಒಳಚರಂಡಿ ಸಾಲು ಇತ್ಯಾದಿಗಳಿಗೆ ಹಾನಿಯಾಗದಂತೆ ಜಾಗ್ರತೆ ವಹಿಸುವುದು ಹಾಗೂ ಒಂದು ವೇಳೆ ಹಾನಿ ಸಂಭವಿಸಿದಲ್ಲಿ ಸ್ವಂತ ವೆಚ್ಚದಲ್ಲಿ ಅವುಗಳ ಪುನಃಸ್ಥಾಪನೆ ಮಾಡುವುದು.

14. ಅಡ್ಡಮೋರಿಗಳ ಹತ್ತಿರ ಒ.ಎಫ್.ಸಿ. ಕೇಬಲ್ ಅಳವಡಿಸಬೇಕಾದ ಸಂದರ್ಭ ಒದಗಿದಲ್ಲಿ ಅಡ್ಡಮೋರಿಯ ಹೆಡ್‌ವಾಲ್‌ನ ಹೊರಭಾಗದಲ್ಲಿ ಅಳವಡಿಸುವುದು ಉಧಾ: ಹೆಡ್‌ವಾಲ್‌ನ ಬಲಭಾಗದ ಅಂಚಿನಲ್ಲಿ ಮತ್ತು ನಾಲಾ ಬೆಡ್‌ನಿಂದ 1.50 ಮೀ ಆಳದಲ್ಲಿ ಅಳವಡಿಸುವುದು.

15. ಡಾಂಬರ್ ರಸ್ತೆಗೆ ಅಡ್ಡಲಾಗಿ ಕೇಬಲ್ ಅಳವಡಿಸಬೇಕಾದ ಸಂದರ್ಭ ಒದಗಿದಲ್ಲಿ ಎಚ್ ಡಿ ಡಿ ಯಂತ್ರದಿಂದ ಕೊರೆಯುವುದು. ಸದರೀ ಯಂತ್ರದ ಬಳಕೆ ಸಾಧ್ಯವಾಗದ ಸ್ಥಳಗಳಲ್ಲಿ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಲೋಕೋಪಯೋಗಿ ಇಲಾಖೆ ಇವರಿಂದ ಮೌಲ್ಯಮಾಪನ ಮಾಡಿ ಪುನಃಸ್ಥಾಪನೆಗೆ ತಗಲುವ ವೆಚ್ಚವನ್ನು ಈ ಕಚೇರಿಗೆ ಠೇವಣಿ ಮಾಡಿದ ನಂತರ ಕೆಲಸ ಪ್ರಾರಂಭಿಸುವುದು.

16. ಇಲಾಖಾವತಿಯಿಂದ ಯಾವುದೇ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಒ.ಎಫ್.ಸಿ ಕೇಬಲಗಳನ್ನು ಸ್ಥಳಾಂತರಿಸುವ ಸಂದರ್ಭ ಒದಗಿದಲ್ಲಿ ಅದನ್ನು ನಿಮ್ಮ ಸಂಸ್ಥೆಯ ಸ್ವಂತ ವೆಚ್ಚದಲ್ಲಿ ಸ್ಥಳಾಂತರಿಸುವುದು.

17. ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಂಡ ನಂತರ ಕಾಮಗಾರಿ ಪೂರ್ಣಗೊಂಡ ವರದಿಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರ ಮೇಲುರುಜುವಿನೊಂದಿಗೆ ಈ ಕಚೇರಿಗೆ ಸಲ್ಲಿಸುವುದು. ರಸ್ತೆಯ ಹಾನಿಗೊಳಗಾದ ಭಾಗವನ್ನು ಸರಿಪಡಿಸುವುದು, ಕೇಬಲ್ ಅಳವಡಿಸಲು ಅಗೆದಿರುವ ಟ್ರೆಂಚ್‌ಗಳನ್ನು ನಿರ್ಧಿಷ್ಟ ನಿಯಮದಂತೆ ಸರಿಯಾದ ಕ್ರಮದಲ್ಲಿ ತುಂಬುವುದು ಅಲ್ಲದೇ ಯಾವುದೇ ಸಾರ್ವಜನಿಕ ಆಸ್ತಿ ಹಾನಿಯಾದಲ್ಲಿ ಅದನ್ನು ಪುನಃ ಸ್ಥಾಪನೆ ಮಾಡುವುದಕ್ಕೆ ನೀವೇ ಜವಾಬ್ದಾರರಾಗಿದ್ದು, ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರಿಂದ ಕೆಲಸ ತೃಪ್ತಿಕರವಾಗಿರುವ ವರದಿ ಆಧಾರದ ಮೇಲೆ ನಿಮಗೆ ನಿರಾಕ್ಷೇಪಣಾ ಪತ್ರ ನೀಡಲಾಗುತ್ತದೆ.

18. ಸಂಬಂಧಿಸಿದ ಕಾಮಗಾರಿಗೆ ಡಿ.ಡಿ. ಭರಣ ಮಾಡುವಾಗ ನಿರ್ಮಾಣ ಗುತ್ತಿಗೆದಾರರು ಹಾಗೂ ನಿರ್ಮಾಣ ಇಂಜಿನೀಯರರ ಗುರುತಿನ ದಾಖಲೆ, ವಿಳಾಸದ ದಾಖಲೆ, ಶಾಶ್ವತ ಮೊಬೈಲ್ ಸಂಖ್ಯೆ ಗಳನ್ನು ತಪ್ಪದೇ ನೀಡುವುದು.

19. ಕೆಲಸ ಪ್ರಾರಂಭಿಸುವ ಪೂರ್ವದಲ್ಲಿ ರೂ 100.00 ಬಾಂಡ್ ಪೇಪರಿನಲ್ಲಿ ಈ ಮೇಲಿನ ಎಲ್ಲಾ ಶರತ್ತುಗಳನ್ನು ಪಾಲಿಸುವ ಕುರಿತು ಅಂಗಿಕಾರವನ್ನು ನೀಡಬೇಕು.

ಈ ಮೇಲಿನ ಯಾವುದೇ ಶರತ್ತುಗಳನ್ನು ಉಲ್ಲಂಘಿಸಿದಲ್ಲಿ ನಿಮ್ಮ ಅನುಮತಿಯನ್ನು ರದ್ದುಪಡಿಸಿ ಇಲಾಖಾ ನಿಯಮ ಮತ್ತು ನಿಬಂಧನೆಗಳ ಪ್ರಕಾರ ಕ್ರಮ ಜರುಗಿಸುವ ಹಕ್ಕು ಈ ಕಚೇರಿಗೆ ಇರುತ್ತದೆ.

ತಮ್ಮ ವಿಶ್ವಾಸಿ,

ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ ವಿಭಾಗ, ಶಿರಸಿ
(ಉತ್ತರ ಕನ್ನಡ ಜಿಲ್ಲೆ)

ANASHI - DANDELI SPAN.

ಕರ್ನಾಟಕ ಸರ್ಕಾರ

**(ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)**

<u>ಸಂ/ಲೋ.ಬ.ಮತ್ತುಒ.ಜ.ಇ.ವಿ/ಶಿರಸಿ/ಪಿಬಿ–2/OFC/2018–19</u>

254

ಕಾರ್ಯನಿರ್ವಾಹಕ ಇಂಜಿನೀಯರರು ಹಾಗೂ
ರಾಜ್ಯ ಹೆದ್ದಾರಿ ಪ್ರಾಧಿಕಾರಿ ಅಧಿಕಾರಿಯವರ ಕಚೇರಿ,
ಲೋಕೋಪಯೋಗಿ, ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ ವಿಭಾಗ, ಶಿರಸಿ
(ಉತ್ತರಕನ್ನಡ ಜಿಲ್ಲೆ)
ದಿನಾಂಕ: 23/5/2018

ಇವರಿಗೆ,

Reliance Jio infocomm Limited,
RMZ Icon, No. 51, Palace road Cross,
Vasanth Nagar, Bangalore - 560052.

ಮಾನ್ಯರೆ,

**ವಿಷಯ :** ರಿಲಾಯನ್ಸ್ ಕೇಬಲ್ ಅಳವಡಿಸಲು ಅನುಮತಿ ನೀಡುವ ಕುರಿತು

**ಉಲ್ಲೇಖ :** 1. ನಿಮ್ಮ ಕಚೇರಿ ಪತ್ರ ಸಂಖ್ಯೆ: RJIL: OFC: ROW: NLD-7A: Supa-Dandeli/PWD: 001: DD: Dated: 16-05-2018

— *** —

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಚೇರಿ ಪತ್ರ ಸಂಖ್ಯೆ: ಲೋ.ಬ. ಮತ್ತು ಒ.ಜ.ಇ.ವಿ: ಶಿರಸಿ: ಪಿಬಿ–2: ಓ.ಎಫ್.ಸಿ: 2018-19: 187 ದಿನಾಂಕ: 09–05–2018 ರನ್ವಯ ಉತ್ತರ ಕನ್ನಡ ಜಿಲ್ಲೆಯ **ಜೋಯಿಡಾ ತಾಲ್ಲೂಕಿನ ಮುಂಡಗೋಡ** ಅಣಸಿ ರಾಜ್ಯ ಹೆದ್ದಾರಿ-46 ರ ಕಿಮೀ. **80.06** ರಿಂದ **135.86** ರವರಗೆ ಓ.ಎಫ್.ಸಿ. ಕೇಬಲ್ ಅಳವಡಿಸಿದ ನಂತರ ಪುನಃಸ್ಥಾಪನೆಗಾಗಿ ತಗಲುವ ವೆಚ್ಚ ರೂ, **3600000/-** (ರೂ ಮೂವತ್ತಾರು ಲಕ್ಷ) ಗಳನ್ನು ಭರಣ ಮಾಡಲು ತಿಳಿಸಲಾಗಿತ್ತು. ಅದರಂತೆ ಉಲ್ಲೇಖಿತ ತಮ್ಮ ಕಚೇರಿ ಪತ್ರದನ್ವಯ ಡಿಮ್ಯಾಂಡ್ ಡ್ರಾಫ್ಟ್ ಸಂಖ್ಯೆ: **246528 ದಿನಾಂಕ: 15–05–2018** ರನ್ವಯ ಈ ಕಚೇರಿಗೆ ಭರಣ ಮಾಡಿರುತ್ತೀರಿ. ಅದರಂತೆ ಈ ಕೆಳಕಾಣಿಸಿರುವ ಷರತ್ತಿಗೊಳಪಟ್ಟು ಓ.ಎಫ್.ಸಿ ಕೇಬಲ್ ಅಳವಡಿಸಲು ಅನುಮತಿ ನೀಡಲಾಗಿದೆ.

1. ರಸ್ತೆ ಬದಿಯ ಚರಂಡಿಯ ಹೊರಭಾಗದಿಂದ ಸಾಕಷ್ಟು ದೂರದಲ್ಲಿ ಹಾಗೂ ನೆಲದ ಮೇಲ್ಮೈ ಎತ್ತರದಿಂದ 1.65 ಮೀಟರ್ ಆಳಕ್ಕೆ ಕೇಬಲ್ ಅಳವಡಿಸುವುದು. ಅನಿವಾರ್ಯ ಹಾಗೂ ಅಸಾಧಾರಣ ಪ್ರಕರಣಗಲ್ಲಿ ಮಾತ್ರ ಡಾಂಬರ ರಸ್ತೆ ಕತ್ತರಿಸಲು ಅವಕಾಶ ನೀಡಲಾಗುವುದು. ಇಂತಹ ಸಂದರ್ಭದಲ್ಲಿ ಕೆಲಸ ಪ್ರಾರಂಭಿಸುವ ಪೂರ್ವ ಸದರೀ ರಸ್ತೆಯ ಪುನಃಸ್ಥಾಪನಾ ವೆಚ್ಚವನ್ನು **ರಿಯಾಲೈನ್ಸ್ ಜಿಯೋ ಇನ್‌ಫೋಕಾಮ್** ಲಿ. ಬೆಂಗಳೂರು ಇವರಿಂದ ಠೇವಣಿ ಮಾಡಿಕೊಂಡು ಅನುಮತಿಸಲಾಗುವುದು. ಕೆಲಸವನ್ನು ಪ್ರಾರಂಭಿಸುವ ಪೂರ್ವದಲ್ಲಿ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯವರಿಂದ ಪ್ರಸ್ತಾಪಿಸಲಾದ ಸ್ಥಳದ ನಕ್ಷೆಯೊಂದಿಗೆ ಪರಿವೀಕ್ಷಣೆ ಮಾಡಿಸಿ ಅವರ ನಿರ್ದೇಶನದಂತೆ ಕೆಲಸ ನಿರ್ವಹಿಸುವುದು.
2. ಓ.ಎಫ್.ಸಿ. ಕೇಬಲನ್ನು ಮಳೆಗಾಲದ ನಂತರ ಅಳವಡಿಸುವುದು.
3. ಕಾಮಗಾರಿ ಪೂರ್ಣಗೊಂಡ ನಂತರ ಓ.ಎಫ್.ಸಿ. ಅಳವಡಿಸಿದ ಸ್ಥಳದಲ್ಲಿ ಸೂಕ್ತ, ಸಾಮಗ್ರಿಗಳನ್ನು ಉಪಯೋಗಿಸಿ, MORT/ISI ಸ್ಪೆಶಿಫಿಕೇಶನ್ ಪ್ರಕಾರ ಸಮಮಟ್ಟ ಮಾಡಿ ಸ್ಥಳವನ್ನು ಪೂರ್ವ ಸ್ಥಿತಿಗೆ ತರುವುದು.
4. ಕೇಬಲ್ ಅಳವಡಿಸುವ ಸಮಯದಲ್ಲಿ ಉಂಟಾಗುವ ಉದ್ದ ಚರಂಡಿ/ ಅಡ್ಡ ಚರಂಡಿ / ಬದಿ ಚರಂಡಿಗಳು ಮುಚ್ಚಿ ನೀರು ಸರಾಗವಾಗಿ ಹೋಗಲು ಅಡೆ ತಡೆಯಾದಲ್ಲಿ ಅದನ್ನು ತೆರವುಗೊಳಿಸಿ ಚರಂಡಿಗಳನ್ನು ಪೂರ್ವಸ್ಥಿತಿಗೆ ತರುವುದು.
5. ಕಾಮಗಾರಿ ಪ್ರಗತಿಯಲ್ಲಿರುವಾಗ ರಸ್ತೆ ಸುರಕ್ಷತಾ ಕ್ರಮಗಳನ್ನು ತಪ್ಪದೇ ಪಾಲಿಸುವುದು. ಸುರಕ್ಷತಾ ಕ್ರಮಗಳಾದ ರಸ್ತೆ ತಡೆಗಟ್ಟುವಿಕೆ, ಅಪಾಯ ಸೂಚಿಸುವ ದೀಪಗಳು, ಎಚ್ಚರಿಕೆ ಫಲಕಗಳನ್ನು ಕಡ್ಡಾಯವಾಗಿ ಅಳವಡಿಸುವುದು. ಅಗತ್ಯವಿದ್ದಲ್ಲಿ ಸಂಚಾರಕ್ಕೆ ಅಡ್ಡಿಯಾಗದಂತೆ ಕ್ರಮ ರಸ್ತೆಯ ಸುಗಮ ಸಂಚಾರಕ್ಕೆ ಟ್ರಾಫಿಕ್ ಪೋಲೀಸರನ್ನು ನೇಮಿಸಿಕೊಂಡು ಜರುಗಿಸುವುದು. ಈ ಸಮಯದಲ್ಲಿ ಸಂಚಾರ ವಿಳಂಬ ಹಾಗೂ ಅಪಘಾತ ಸಂಭವಿಸಿದಲ್ಲಿ ನೀವೇ ಮಾತ್ರ ಜವಾಬ್ದಾರರು.
6. ಅಗೆತ ಹಾಗೂ ಪುನಃಭರ್ತಿ ಕೆಲಸವನ್ನು ಅನುಮತಿಸಿದ ದಿನಾಂಕದಿಂದ 90 ದಿನಗಳೊಳಗಾಗಿ ಪೂರ್ಣಗೊಳಿಸಿ ಸ್ಥಳವನ್ನು ಪೂರ್ವಸ್ಥಿತಿಯಲ್ಲಿರುವಂತೆ ಮಾಡುವುದು.

7. ಹಾಲಿ ಇರುವ ಅಡ್ಡಮೋರಿಗಳು, ಸೇತುವೆಗಳು, ಮಾಹಿತಿ ಫಲಕಗಳು, ಸೂಚನಾಫಲಕಗಳು, ಕಿಮೀ.. ಕಲ್ಲುಗಳು, ಹೆಕ್ಟೋ ಮೀ. ಕಲ್ಲುಗಳು, ನೀರು ಸರಬರಾಜು ಪೈಪುಲೈನ್‌ಗಳು, ಹೆಸ್ಕಾಂ ಕೇಬಲ್‌ಗಳು, ಹಾಗೂ ಬಿ.ಎಸ್.ಎನ್.ಎಲ್ ಕೇಬಲುಗಳು ಇತ್ಯಾದಿ ಸಾರ್ವಜನಿಕ ಆಸ್ತಿಗಳಿಗೆ ಹಾನಿಯಾಗದಂತೆ ಜಾಗ್ರತೆ ವಹಿಸುವುದು.

8. ರಸ್ತೆಯ ಅಗಲೀಕರಣ ಹಾಗೂ ಅಭಿವೃದ್ಧಿ ಸಂದರ್ಭದಲ್ಲಿ ನೀವು ಅಳವಡಿಸಿದ ಕೇಬಲ್‌ಗಳನ್ನು ಸ್ಥಳಾಂತರ ಅಥವಾ ಮಾರ್ಪಾಡು ಮಾಡಬೇಕಿದ್ದಲ್ಲಿ ನಂತರದ ದಿನಾಂಕದಿಂದ ನಿಗದಿಪಡಿಸಿದ ಅವಧಿಯೊಳಗೆ ಪೂರ್ಣಗೊಳಿಸುವುದು ಹಾಗೂ ಇದರ ವೆಚ್ಚವನ್ನು ರಿಯಾಲೈನ್ಸ್ ಜಿಯೋ ಇನ್‌ಫೋಕಾಮ್ ಲಿ. ಬೆಂಗಳೂರು ಇವರಿಂದ ಭರಿಸುವುದು.

9. ಕೇಬಲ್ ಅಳವಡಿಸುವ ಸ್ಥಳದಲ್ಲಿ ನಿರ್ಬಂಧಗಳೇನಾದರು ಇದ್ದಲ್ಲಿ ಸಂಬಂಧಿಸಿದ ಶಾಖಾಧಿಕಾರಿ ಅಥವಾ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರನ್ನು ಸಂಪರ್ಕಿಸಿ ಅವರ ನಿರ್ದೇಶನ ಪಾಲಿಸುವುದು.

10. ಕೇಬಲನ್ನು ಅಳವಡಿಸಿದ ನಂತರ ಪುನರ್ಭರ್ತಿ ಕೆಲಸವನ್ನು ಸರಿಯಾದ ಸಂಕೋಚನ ಕ್ರಮದಲ್ಲಿ ನಿರ್ಧಿಷ್ಟ ನಿಯಮದಂತೆ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್/ ಶಾಖಾಧಿಕಾರಿಗಳು ಮೇಲ್ವಿಚಾರಣೆಯಡಿಯಲ್ಲಿ ಇಲಾಖೆಗೆ ತೃಪ್ತಿಕರವಾಗುವಂತೆ ಕೈಗೊಳ್ಳುವುದು.

11. ಯಾವುದೇ ಚೇಂಬರನ್ನು ನಿರ್ಮಾಣ ಮಾಡುವ ಪೂರ್ವದಲ್ಲಿ ನಿರ್ಮಾಣ ಸ್ಥಳವನ್ನು ಸಂಬಂಧಿಸಿದ ಶಾಖಾಧಿಕಾರಿ/ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ ಲೋಕೋಪಯೋಗಿ ಇಲಾಖೆ ಇವರ ಗಮನಕ್ಕೆ ತರಬೇಕು.

12. ರಸ್ತೆಯ ರಚನೆಗೆ ಹಾನಿಯಾಗುವಂತಹ ಯಾವುದೇ ಯಂತ್ರೋಪಕರಣಗಳನ್ನು ಟ್ರೆಂಚ್ ಅಗೆಯಲು ಬಳಸಕೂಡದು..

13. ಎಲ್ಲಾ ಭೂಗತ ಸೌಲಭ್ಯಗಳಾದ ಅಡ್ಡಮೋರಿಗಳ ರಚನೆಗಳಿಗೆ, ನೀರು ಸರಬರಾಜು ಪೈಪ್‌ಲೈನ್, ವಿದ್ಯುತ್ ಕೇಬಲ್‌ಗಳು, ಒಳಚರಂಡಿ ಸಾಲು ಇತ್ಯಾದಿಗಳಿಗೆ ಹಾನಿಯಾಗದಂತೆ ಜಾಗ್ರತೆ ವಹಿಸುವುದು ಹಾಗೂ ಒಂದು ವೇಳೆ ಹಾನಿ ಸಂಭವಿಸಿದಲ್ಲಿ ಸ್ವಂತ ವೆಚ್ಚದಲ್ಲಿ ಅವುಗಳ ಪುನಃಸ್ಥಾಪನೆ ಮಾಡುವುದು.

14. ಅಡ್ಡಮೋರಿಗಳ ಹತ್ತಿರ ಒ.ಎಫ್.ಸಿ. ಕೇಬಲ್ ಅಳವಡಿಸಬೇಕಾದ ಸಂದರ್ಭ ಒದಗಿದಲ್ಲಿ ಅಡ್ಡಮೋರಿಯ ಹೆಡ್‌ವಾಲ್‌ನ ಹೊರಭಾಗದಲ್ಲಿ ಅಳವಡಿಸುವುದು ಉಧಾ: ಹೆಡ್‌ವಾಲ್‌ನ ಬಲಭಾಗದ ಅಂಚಿನಲ್ಲಿ ಮತ್ತು ನಾಲಾ ಬೆಡ್‌ನಿಂದ 1.50 ಮೀ ಆಳದಲ್ಲಿ ಅಳವಡಿಸುವುದು.

15. ಡಾಂಬರ್ ರಸ್ತೆಗೆ ಅಡ್ಡಲಾಗಿ ಕೇಬಲ್ ಅಳವಡಿಸಬೇಕಾದ ಸಂದರ್ಭ ಒದಗಿದಲ್ಲಿ ಎಚ್ ಡಿ ಡಿ ಯಂತ್ರದಿಂದ ಕೊರೆಯುವುದು. ಸದರೀ ಯಂತ್ರದ ಬಳಕೆ ಸಾಧ್ಯವಾಗದ ಸ್ಥಳಗಳಲ್ಲಿ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ್ ಲೋಕೋಪಯೋಗಿ ಇಲಾಖೆ ಇವರಿಂದ ಮೌಲ್ಯಮಾಪನ ಮಾಡಿ ಪುನಃಸ್ಥಾಪನೆಗೆ ತಗಲುವ ವೆಚ್ಚವನ್ನು ಈ ಕಚೇರಿಗೆ ಠೇವಣಿ ಮಾಡಿದ ನಂತರ ಕೆಲಸ ಪ್ರಾರಂಭಿಸುವುದು.

16. ಇಲಾಖಾ ವತಿಯಿಂದ ಯಾವುದೇ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಓ.ಎಫ್.ಸಿ ಕೇಬಲಗಳನ್ನು ಸ್ಥಳಾಂತರಿಸುವ ಸಂದರ್ಭ ಒದಗಿದಲ್ಲಿ ಅದನ್ನು ನಿಮ್ಮ ಸಂಸ್ಥೆಯ ಸ್ವಂತ ವೆಚ್ಚದಲ್ಲಿ ಸ್ಥಳಾಂತರಿಸುವುದು.

17. ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಂಡ ನಂತರ ಕಾಮಗಾರಿ ಪೂರ್ಣಗೊಂಡ ವರದಿಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರ ಮೇಲುರುಜುವಿನೊಂದಿಗೆ ಈ ಕಚೇರಿಗೆ ಸಲ್ಲಿಸುವುದು. ರಸ್ತೆಯ ಹಾನಿಗೊಳಗಾದ ಭಾಗವನ್ನು ಸರಿಪಡಿಸುವುದು, ಕೇಬಲ್ ಅಳವಡಿಸಲು ಅಗೆದಿರುವ ಟ್ರೆಂಚ್‌ಗಳನ್ನು ನಿರ್ಧಿಷ್ಟ ನಿಯಮದಂತೆ ಸರಿಯಾದ ಕ್ರಮದಲ್ಲಿ ತುಂಬುವುದು ಅಲ್ಲದೇ ಯಾವುದೇ ಸಾರ್ವಜನಿಕ ಅಸ್ತಿ ಹಾನಿಯಾದಲ್ಲಿ ಅದನ್ನು ಪುನಃ ಸ್ಥಾಪನೆ ಮಾಡುವುದಕ್ಕೆ ನೀವೇ ಜವಾಬ್ದಾರರಾಗಿದ್ದು, ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರರಿಂದ ಕೆಲಸ ತೃಪ್ತಿಕರವಾಗಿರುವ ವರದಿ ಆಧಾರದ ಮೇಲೆ ನಿಮಗೆ ನಿರಾಕ್ಷೇಪಣಾ ಪತ್ರ ನೀಡಲಾಗುತ್ತದೆ.

18. ಸಂಬಂಧಿಸಿದ ಕಾಮಗಾರಿಗೆ ಡಿ.ಡಿ. ಭರಣ ಮಾಡುವಾಗ ನಿರ್ಮಾಣ ಗುತ್ತಿಗೆದಾರರು ಹಾಗೂ ನಿರ್ಮಾಣ ಇಂಜನೀಯರರ ಗುರುತಿನ ದಾಖಲೆ, ವಿಳಾಸದ ದಾಖಲೆ, ಶಾಶ್ವತ ಮೊಬೈಲ್ ಸಂಖ್ಯೆ, ಗಳನ್ನು ತಪ್ಪದೇ ನೀಡುವುದು.

19. ಕೆಲಸ ಪ್ರಾರಂಭಿಸುವ ಪೂರ್ವದಲ್ಲಿ ರೂ 100.00 ಬಾಂಡ್ ಪೇಪರಿನಲ್ಲಿ ಈ ಮೇಲಿನ ಎಲ್ಲಾ ಶರತ್ತುಗಳನ್ನು ಪಾಲಿಸುವ ಕುರಿತು ಅಂಗಿಕಾರವನ್ನು ನೀಡಬೇಕು.

ಈ ಮೇಲಿನ ಯಾವುದೇ ಶರತ್ತುಗಳನ್ನು ಉಲ್ಲಂಘಿಸಿದಲ್ಲಿ ನಿಮ್ಮ ಅನುಮತಿಯನ್ನು ರದ್ದುಪಡಿಸಿ ಇಲಾಖಾ ನಿಯಮ ಮತ್ತು ನಿಬಂಧನೆಗಳ ಪ್ರಕಾರ ಕ್ರಮ ಜರುಗಿಸುವ ಹಕ್ಕು ಈ ಕಚೇರಿಗೆ ಇರುತ್ತದೆ.

ತಮ್ಮ ವಿಶ್ವಾಸಿ,

ಕಾರ್ಯನಿರ್ವಾಹಕ ಇಂಜನೀಯರ್,
ಹಾಗೂ ರಾಜ್ಯ ಹೆದ್ದಾರಿ ಪ್ರಾಧಿಕಾರ ಅಧಿಕಾರಿ
ಲೋಕೋಪಯೋಗಿ ಬಂದರು ಮತ್ತು ಒಳನಾಡು
ಜಲಸಾರಿಗೆ ಇಲಾಖೆ ವಿಭಾಗ, ಶಿರಸಿ
(ಉತ್ತರ ಕನ್ನಡ ಜಿಲ್ಲೆ)

ಈ ಸನ
ನಭರ್ತಿ
ವಂತೆ ಮಾಡು